ತನ್ನಿ, ಪಾಸ್ ಮಾಡಿ. ಈಗ ವಾಟಾಳ್ ನಾಗರಾಜ್‌ರವರೇನು ಕೇಳುತ್ತಿದ್ದಾರೆ, ಅದಕ್ಕೆ ಅದನ್ನು ತಂದರೆ ಆಗ ಅದು ಇತ್ಯರ್ಥವಾಗಬಹುದೆಂಬುದು ನನ್ನ ಅಭಿಪ್ರಾಯ.

ಶ್ರೀ ಆರ್.ರೋಷನ್ ಬೇಗ್ : ಮಾನ್ಯ ಮಂತ್ರಿಯವರು additional 500 MLD of water to the city by the end of 2011-2012 ಎಂದು ಹೇಳಿ Statement ಕೊಟ್ಟಿದ್ದಾರೆ. ಇನ್ನೂ 2020 ವರೆಗೂ ಇದೇ ತರಹ ಹೋದರೂ ಬೆಂಗಳೂರು ನಗರದಲ್ಲಿ the situation of water will be as on today, as of now ಯಾವ ತರಹವಿದೆ, ಅದೇ ತರಹವಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮನೆಗಾಗಲಿ, ನಮ್ಮ ಮನೆಗಾಗಲಿ ಅಷ್ಟು ತೊಂದರೆಗಳಾಗುವುದಿಲ್ಲ. ಪ್ರಕಾಶ್‌ರವರೆ, ತಮ್ಮ ಮನೆಗಾಗಲಿ, ಮಂತ್ರಿಗಳ ಮನೆಗಾಗಲಿ ನೀರಿನ ತೊಂದರೆ ಅಷ್ಟು ಆಗುವುದಿಲ್ಲ. ಬೆಂಗಳೂರಿನ ಬಡಾವಣೆಗಳ ಕಡೆ ತಾವೊಂದು ಸಾರಿ ಹೋಗಿ ನೋಡಿ. ಅಲ್ಲಿ 4–4 ದಿವಸ ನೀರು ಬರುವುದಿಲ್ಲ. ನನ್ನ ಕ್ಷೇತ್ರವೆಂದಲ್ಲ. ಬೆಂಗಳೂರಿನಲ್ಲಿ ಹಲವಾರು ಕಡೆ ಬಹಳ Problem ಇದೆ. ಜಯನಗರದಲ್ಲಾಗಲಿ, ಯಾವುದೇ ಇರಲಿ. Greater Bangalore ಎಂದು ಹೇಳಿ ಹೊಸ C.M.Cs ಎಂದೇನು include ಮಾಡಿಕೊಂಡಿದ್ದೇವೆ, ಅಲ್ಲಿ ತಾವು ಕೇಳಬೇಡಿ. ಅಲ್ಲಿ ಒಂದೊಂದು ವಾರ ನೀರು ಬರುವುದಿಲ್ಲ.

ಅಧ್ಯಕ್ಷರು : ಆಯಿತು, ಪ್ರಶ್ನೆ ಕೇಳಿ. ಇದು ಪ್ರಶ್ನೋತ್ತರ.

ಶ್ರೀ ಆರ್. ರೋಷನ್ ಬೇಗ್ : I want a white paper on the affairs of the BWSSB in Bangalore ಎಂದು 10 ವರ್ಷಗಳಿಂದ ನಾವು ಕೇಳುತ್ತಿದ್ದೇವೆ. ಜಪಾನ್‌ನಿಂದ ಇಷ್ಟು ಕೋಟಿ ರೂಪಾಯಿ ಲೋನ್ ತೆಗೆದುಕೊಂಡಿದ್ದೇವೆ, ಇಷ್ಟು millions of Rupees ನಾವು ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ತೆಗೆದುಕೊಂಡಿದ್ದ ಆ ಹಣ ಏನಾಯಿತು? Underground.

ಶಾದಿಮಹಲ್ / ಸಮುದಾಯ ಭವನಗಳ ನಿರ್ಮಾಣ

247 (1573) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರೆಗೆ ನಿರ್ಮಾಣಗೊಂಡಿರುವ ಶಾದಿಮಹಲ್/ ಸಮುದಾಯ ಭವನಗಳೆಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು);

ಆ) ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಶಾದಿಮಹಲ್/ ಸಮುದಾಯ ಭವನಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ? (ಜಿಲ್ಲಾವಾರು ವಿವರ ನೀಡುವುದು);

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಇಲಾಖೆಯಿಂದ ಇವರೆಗೆ 285 ಶಾದಿಮಹಲ್ ಸಮುದಾಯ ಭವನಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಲಾಗುತ್ತದೆ.

ಜಿಲ್ಲಾವಾರು ವಿವರಗಳನ್ನು ಅನುಬಂಧ–1 ನೀಡಲಾಗಿದೆ.

ಆ) ಹೌದು.

ಮಂಜೂರಾತಿ ನೀಡಿದ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಕರ್ನಾಟಕ ಸರ್ಕಾರ

ಶ್ರೀ ಧ್ರುವನಾರಾಯಣ ಆರ್. (ಸಂತೇಮರಹಳ್ಳಿ) ವಿಧಾನಸಭೆಯ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ 1573 (ಅ) ಕ್ಕೆ ಅನುಬಂಧ–1

2000–01 ರಿಂದ 2006–07ನೇ ಸಾಲಿಗೆ ಮಂಜೂರಾದ ಶಾದಿಮಹಲ್/ಸಮುದಾಯ ಭವನ್‌ಗಳ ಜಿಲ್ಲಾವಾರು ವಿವರ

ಕ್ರ ಸಂ.	ಜಿಲ್ಲೆಗಳು	ಮುಕ್ತಾಯವಾಗಿದೆ	ಕಾಮಗಾರಿ ಪ್ರಗತಿಯಲ್ಲಿದೆ	ಕೆಲಸ ಪ್ರಾರಂಭಿಸಿಲ್ಲ/ ಅರ್ಧಕ್ಕೆ ನಿಲ್ಲಿಸಿದೆ	ಒಟ್ಟು
1	ಬೆಂಗಳೂರು–ಗ್ರಾಮಾಂತರ	1	3	–	4
2	ಬೆಂಗಳೂರು ನಗರ	1	2	–	3
3	ಬಾಗಲಕೋಟೆ	5	9	–	14
4	ಬೆಳಗಾಂ	6	15	8	20

5	ಬಳ್ಳಾರಿ	–	8	–	8
6	ಬೀದರ್	2	6	–	8
7	ಬಿಜಾಪುರ	6	19	–	25
8	ಚಾಮರಾಜನಗರ	1	4	–	5
9	ಚಿಕ್ಕಮಗಳೂರು	3	6	–	9
10	ಚಿತ್ರದುರ್ಗ	5	6	–	11
11	ದಕ್ಷಿಣ ಕನ್ನಡ	17	8	–	25
12	ದಾವಣಗೆರೆ	–	7	–	7
13	ಧಾರವಾಡ	4	5	–	9
14	ಗದಗ	2	5	–	7
15	ಗುಲ್ಬರ್ಗಾ	2	15	1 (1) ನಿರ್ದೇಶ ನಾಲಯಕ್ಕೆ ಹಿಂತಿರುಗಿಸಿದೆ	18
16	ಹಾಸನ್	–	6	1 ವರದಿ ಬಾರದ ಕಾರಣ ಅನುದಾನ ಮಂಜೂರು ಮಾಡಿರು ವುದಿಲ್ಲ.	7
17	ಹಾವೇರಿ	7	4	–	11
18	ಕೊಡಗು	1	1	–	2
19	ಕೋಲಾರ	6	3	ಪ್ರಾರಂಭಿಸಿಲ್ಲ.	9
20	ಕೊಪ್ಪಳ	5	2	–	7
21	ಮಂಡ್ಯ	5	4	–	9
22	ಮೈಸೂರು	–	6	1	7
23	ರಾಯಚೂರು	3	7	–	10

24	ಶಿವಮೊಗ್ಗ	4	14	–	18
25	ತುಮಕೂರು	1	3	–	4
26	ಉಡುಪಿ	5	4	–	9
27	ಉತ್ತರ ಕನ್ನಡ	2	8	–	10
	ಒಟ್ಟು	**91**	**180**	**11**	**285**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1573ಕ್ಕೆ ಅನುಬಂಧ–2

ಕ್ರ. ಸಂ.	ಜಿಲ್ಲೆ	ಒಟ್ಟು
1	ಶಿವಮೊಗ್ಗ	1
2	ದಾವಣಗೆರೆ	3
3	ಧಾರವಾಡ	2
4	ಹಾಸನ	4
5	ಚಾಮರಾಜನಗರ	1
6	ಕೊಪ್ಪಳ	3
7	ದಕ್ಷಿಣ ಕನ್ನಡ	2
8	ಉತ್ತರ ಕನ್ನಡ	2
9	ಚಿಕ್ಕಮಗಳೂರು	3
10	ಚಿತ್ರದುರ್ಗ	1
11	ಬಿಜಾಪುರ	2
12	ಮಂಡ್ಯ	1
13	ಗುಲ್ಬರ್ಗಾ	2
14	ಬಳ್ಳಾರಿ	2
15	ಬಾಗಲಕೋಟೆ	1
16	ಬೆಂಗಳೂರು	1
17	ಬೆಂಗಳೂರು ಗ್ರಾಮಾಂತರ	1
18	ಮೈಸೂರು	1
19	ಕೋಲಾರ	1
20	ಬೆಳಗಾವಿ	1

ಶ್ರೀ ಆರ್. ಧ್ರುವನಾರಾಯಣ : ಪ್ರಸಕ್ತ 2007–08ರಲ್ಲಿ ಶಾದಿಮಹಲ್ ನಿರ್ಮಾಣಕ್ಕೆ ಸರ್ಕಾರ ಎಷ್ಟು ಹಣ ಒದಗಿಸಿದೆ? ಜೊತೆಗೆ, ಒಂದು ಶಾದಿಮಹಲ್ ಕಟ್ಟಡಕ್ಕೆ ಎಷ್ಟು ಹಣವನ್ನು ತಾವು ಒದಗಿಸುತ್ತೀರಿ? ಈ ಶಾದಿಮಹಲ್‌ಗಳನ್ನು ಕೊಡತಕ್ಕಂಥದ್ದರಲ್ಲಿ ಅನುಸರಿಸುವ ಮಾನದಂಡ ಏನೆಂದು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಸದಸ್ಯರಾದ ಆರ್. ಧ್ರುವನಾರಾಯಣರವರು ಶಾದಿಮಹಲ್ ಮತ್ತು ಸಮುದಾಯ ಭವನ, community hall ಗಳ ಬಗ್ಗೆ ಕೇಳಿದ್ದಾರೆ. ಈ ಯೋಜನೆ ನಮ್ಮ ರಾಜ್ಯದಲ್ಲಿ 2000–01ರಲ್ಲಿ ಜಾರಿಗೆ ಬಂದಿದೆ. 2006–07ನೇ ಸಾಲಿಗೆ ಮುಂಚಿನಿಂದ ಇಲ್ಲಿಯವರೆಗೆ ಪ್ರತಿ ಶಾದಿಮಹಲ್‌ಗೆ 5 ಲಕ್ಷ ರೂಪಾಯಿ ಕೊಡಲಾಗುತ್ತಿತ್ತು. ಮುಂಚೆ ಏನಿತ್ತೆಂದರೆ, ಒಂದು ಸಮುದಾಯ ಭವನಕ್ಕೆ 5 ಲಕ್ಷ ರೂಪಾಯಿ ಕೊಡಬೇಕು, ಉಳಿದ ಹಣವನ್ನು M.P.L.A.D. fund ಮತ್ತು ಇತರ ಸಂಸ್ಥೆಗಳಿಂದ ಅದನ್ನು ಭರಿಸಿ, ಪೂರ್ಣಗೊಳಿಸಬೇಕೆಂದು ಇತ್ತು. ತಾವು ನೋಡಿದಾಗ, ಬಹಳಷ್ಟು ಅಪೂರ್ಣ ಸ್ಥಿತಿಯಲ್ಲಿದ್ದವು Incomplete stage ನಲ್ಲಿದ್ದವು. ಅದನ್ನು ಗಮನದಲ್ಲಿಟ್ಟುಕೊಂಡು ಅಲ್ಪಸಂಖ್ಯಾತ ಇಲಾಖೆಯಿಂದ maximum 50 lakhs rupees ಅನ್ನು district head quarter ಗಳಲ್ಲಿ ಕೊಡಬೇಕು, ತಾಲ್ಲೂಕು head quarter ಗಳಲ್ಲಿ maximum 20 ಲಕ್ಷ ರೂಪಾಯಿ ಕೊಡಬೇಕೆಂದು ನಾವೊಂದು ರೂಲ್ ಮಾಡಿ ಈಗಾಗಲೇ ಸುಮಾರು 2006–07ನೇ ಇಸವಿಯಲ್ಲಿ 42 ಶಾದಿಮಹಲ್‌ಗಳಿಗೆ ಹಣವನ್ನು ಕೊಟ್ಟಿದ್ದೇವೆ. 2007–08ನೇ ಸಾಲಿನಲ್ಲಿ ಈವರೆಗೆ 35 ಶಾದಿಮಹಲ್‌ಗಳು ಮತ್ತು Community Hall ಗಳಿಗೆ ಈ ರೀತಿ ಹಣವನ್ನು ಒದಗಿಸಲಾಗಿದೆ. 42ರಲ್ಲಿ 2006–07ನೇ ಸಾಲಿನಲ್ಲಿ ಮುಸ್ಲಿಂ ಸಮುದಾಯಕ್ಕೆ 28, ಜೈನ್ ಸಮುದಾಯಕ್ಕೆ 8, ಕ್ರಿಶ್ಚಿಯನ್ ಸಮುದಾಯಕ್ಕೆ 6, 2007 ಮತ್ತು 2008ನೇ ಸಾಲಿನಲ್ಲಿ ಮುಸ್ಲಿಂ ಸಮುದಾಯಕ್ಕೆ 25, ಜೈನ್ ಸಮುದಾಯಕ್ಕೆ 5, ಕ್ರಿಶ್ಚಿಯನ್ ಸಮುದಾಯಕ್ಕೆ 5 ಈ ರೀತಿ ಹಣವನ್ನು ಕೊಟ್ಟಿದ್ದೇವೆ.

ಶ್ರೀ ಆರ್.ರೋಷನ್ ಬೇಗ್ : ಇದುವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ?

ಶ್ರೀ ಇಕ್ಬಾಲ್ ಅನ್ಸಾರಿ : 2006–07ನೇ ಸಾಲಿನಲ್ಲಿ ನಮಗೆ ಮಂಜೂರಾದ ಹಣ 6 ಕೋಟಿ. ನಮ್ಮಲ್ಲಿ ನಿಗದಿಪಡಿಸಿದ ಹಣ ಆರೂವರೆ ಕೋಟಿ ರೂಪಾಯಿ. ಈಗಾಗಲೇ ಅದು ಸಂಪೂರ್ಣವಾಗಿ ಮುಗಿಯುವ ಹಂತದಲ್ಲಿ ಬಂದುಬಿಟ್ಟಿದೆ. ಬಹಳಷ್ಟು ಇನ್ನೂ ಕಡತಗಳು ಇವೆ. ಮಾನದಂಡ ಏನೆಂದು ತಾವು ಕೇಳಿದ್ದೀರಿ. ಮೊದಲೆಲ್ಲ ಬಹಳಷ್ಟು Procedures ಇದ್ದವು. ಅದನ್ನೆಲ್ಲ simplify ಮಾಡಿ ಆ ಸಮುದಾಯ ಭವನಗಳು, Community hall ಗಳು ಅಥವಾ ಶಾದಿ ಮಹಲ್‌ಗಳ ಅವರದೊಂದು trust ಇರಬೇಕು, trust ನವರ ಭೂಮಿ ಇರಬೇಕು. ಭೂಮಿ ಇದ್ದರೆ, ಅವರು covering letterನಲ್ಲಿ endorse ಮಾಡಿ ಸರ್ಕಾರದಿಂದ ಏನು grant ಕೊಡುತ್ತಿದ್ದೇವೆ, ಅದು BCM District Officer ಒಬ್ಬರು district ನಲ್ಲಿರುತ್ತಾರೆ, ಅವರ ಹತ್ತಿರ ಆ documents ಸಲ್ಲಿಸಿದಾಗ ಅಲ್ಲಿಂದ ಅವರು ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾರೆ.

(11-30 AM)

Minority Directorate ನಿಂದ Principal Secretaryಗೆ ಹೋಗುತ್ತದೆ. Principal Secretary ನಿಂದ Minister Officeಗೆ ಬಂದು ಅಲ್ಲಿ approval ಆಗಿ ಹೋಗುವಂಥಾದ್ದು ಇರುತ್ತದೆ.

ಅಧ್ಯಕ್ಷರು : ನೀವು ಈ ರೀತಿ procedure ಎಲ್ಲಾ ಹೇಳುತ್ತಾ ಹೋದರೆ ಸಮಯವಿಲ್ಲ.

ಶ್ರೀ ಇಕ್ಬಾಲ್ ಅನ್ಸಾರಿ : ಅವರು ಮಾನದಂಡಗಳೇನು ಎಂದು ಕೇಳಿದರು. ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ಕೇಳುವಂಥಾದೆಲ್ಲಕ್ಕೂ ನೀವು detail ಆಗಿ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಆರ್.ಧ್ರುವನಾರಾಯಣ್ : ಜಿಲ್ಲಾ ಕೇಂದ್ರಕ್ಕೆ ಮತ್ತು ತಾಲ್ಲೂಕು ಕೇಂದ್ರಗಳಿಗೆ ಕೊಡುತ್ತೇವೆ ಎನ್ನತಕ್ಕಂಥಾದ್ದನ್ನು ಅವೆರು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರವಾದ ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರ ತಾಲ್ಲೂಕು ಕೇಂದ್ರವಲ್ಲ. ಅದು ಚಾಮರಾಜನಗರಕ್ಕೆ ಹೋಗುತ್ತದೆ. ಕ್ಷೇತ್ರಕ್ಕೆ ಒಂದು ಶಾದಿಮಹಲ್ ಅನ್ನು ಕೊಡುವ ರೀತಿ ತಾವು ಮಾಡಬೇಕು. ಒಂದು ಕ್ಷೇತ್ರಕ್ಕೊಂದು ಶಾದಿಮಹಲ್ ಆದರೆ ನಮಗೆ ಅನುಕೂಲವಾಗುತ್ತದೆ. ನನ್ನ ತಾಲ್ಲೂಕು head

quarters ಚಾಮರಾಜನಗರ. ಅಲ್ಲಿಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಶಾಸಕರಾಗಿದ್ದಾರೆ. ನನ್ನ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ಹೋಬಳಿ ಕೇಂದ್ರಗಳಲ್ಲಿ, ಒಂದು ಕ್ಷೇತ್ರಕ್ಕೆ ಒಂದು ಶಾದಿಮಹಲ್ ಕೊಡುವಂಥ ಕೆಲಸವನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳ ಲಿಮಿಟ್ ಮಾಡಿದ್ದೇವೆ. ತಾಲ್ಲೂಕು ಕೇಂದ್ರಗಳ ಹೋಬಳಿಗಳಲ್ಲಿ 5 ಲಕ್ಷ, 10 ಲಕ್ಷ ರೂಪಾಯಿಗಳ requirement ಇರುತ್ತದೆ. ಅದಕ್ಕೆ ತಾವು estimate ಸಲ್ಲಿಸಿದರೆ ತಮಗೂ ಮಾಡಿಕೊಡಲಾಗುತ್ತದೆ. ತಾಲ್ಲೂಕಿನಲ್ಲಿ ಎಂದರೆ ಅದು ತಾಲ್ಲೂಕು head quarter ನಲ್ಲಿಯೇ ಇರಬೇಕು ಎಂದೇನಿಲ್ಲ. ಹೋಬಳಿಗಳಲ್ಲೂ ಮಾಡಬಹುದು. ಅಲ್ಪಸಂಖ್ಯಾತರ ಜನಸಂಖ್ಯೆ ಜಾಸ್ತಿ ಇದ್ದರೆ ಅಲ್ಲೂ ಸಹ ಸರ್ಕಾರ ಕೊಡುತ್ತದೆ.

ಪ್ರಶ್ನೆ ಸಂಖ್ಯೆ 1527

ಅಧ್ಯಕ್ಷರು : ಪ್ರಕಾಶ್ ಖಂಡ್ರೆಯವರ ಈ ಪ್ರಶ್ನೆ ಆರ್ಥಿಕ ಇಲಾಖೆಗೆ ವರ್ಗಾವಣೆಯಾಗಿದೆ.

ಪ್ರಶ್ನೆ ಸಂಖ್ಯೆ 531

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರೇ, ಈಗ ಸಾರಿಗೆ ಸಚಿವರು ಬಂದಿಲ್ಲ. ಕೊನೆಯಲ್ಲಿ ಬರುತ್ತಾರಂತೆ. ಆಗ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

250 (1592) ಶ್ರೀ ತಿಮ್ಮರಾಯಪ್ಪ ಕೆ.ಎಂ (ಪಾವಗಡ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟ ಐತಿಹಾಸಿಕ ಪ್ರದೇಶವಾಗಿದ್ದು ಇದನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನೇಕ ರಾಜ ಮಹಾರಾಜರು ಆಳಿದ ಇತಿಹಾಸ ಇರುವ ಈ ಪ್ರದೇಶಕ್ಕೆ ಅನೇಕ ಸಾರ್ವಜನಿಕರು ಬಂದು ಹೋಗುವುದು ಹಾಗೂ ಪುಣ್ಯ ಸ್ಥಳವೆಂದು ಪ್ರತೀತಿ ಇರುವ ಈ ಬೆಟ್ಟಕ್ಕೆ ಸರ್ಕಾರದ ವತಿಯಿಂದ ಅನುದಾನ ಬಿಡುಗಡೆ ಗೊಳಿಸಲಾಗುವುದೇ?